2258(3219) ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುವೆಂಪು ಶತಮಾನೋತ್ಸವ ಆಚರಿಸಲು ರಾಜ್ಯ ಸರ್ಕಾರ ನಿಗದಿಪಡಿಸಿದ, ಬಿಡುಗಡೆ ಮಾಡಿದ ಹಾಗೂ ಖರ್ಚಾದ ಹಣವೆಷ್ಟು:

ಆ) ಈ ಸಂಬಂಧ ಇದುವರೆಗೆ ಹಮ್ಮಿಕೊಂಡ ಕಾರ್ಯಕ್ರಮಗಳಾವುವು:

ಇ) ಕುವೆಂಪು ಶತಮಾನೋತ್ಸವ ಪ್ರಯುಕ್ತ ಇನ್ನು ಮುಂದೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆಯೇ;

ಈ) ಹೌದಾದಲ್ಲಿ, ಎಲ್ಲಿ ಮತ್ತು ಯಾವಾಗ?

ಶ್ರೀ ಧರ್ಮಸಿಂಗ್ (ಸನ್ಮಾನ್ಯ ಮುಖ್ಯಮಂತ್ರಿಗಳು)

ಅ) ರೂ. 85.00 ಲಕ್ಷ 2003–04ನೇ ಸಾಲಿನಲ್ಲಿ ರೂ. 25.00 ಲಕ್ಷ 2004–05ನೇ ಸಾಲಿನಲ್ಲಿ ರೂ. 25.00 ಲಕ್ಷ ಒಟ್ಟಾರೆ ರೂ. 50.00 ಲಕ್ಷ ವೆಚ್ಚವಾದ ಹಣ. ರೂ. 50 ಲಕ್ಷ ಕುವೆಂಪು ಪ್ರತಿಷ್ಠಾನಕ್ಕೆ ರೂ. 35.00 ಲಕ್ಷಗಳು.

ಆ) ಅನುಬಂಧದಲ್ಲಿ ಲಗತ್ತಿಸಿದೆ.

ಇ) ಕುವೆಂಪು ಭಾಷಾ ಭಾರತಿ ಭವನ ನಿರ್ಮಾಣ ಯೋಜನೆಯನ್ನು ಕೈಗೆತ್ತಿಕೊಳ್ಳಲು ಪ್ರಸ್ತಾಪಿಸಲಾಗಿದೆ. ಶತಮಾನೋತ್ಸವದ ಸಮಾರೋಪ ಸಮಾರಂಭವನ್ನು ಸದ್ಯದಲ್ಲೇ ಏರ್ಪಡಿಸಲಾಗುವುದು.

ಈ) ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಏರ್ಪಡಿಸಲು ಪ್ರಸ್ತಾಪಿಸಲಾಗಿದೆ.

ವಿಧಾನ ಸಭಾ ಸದಸ್ಯರಾದ ಶ್ರೀ ಅರಗ ಜ್ಞಾನೇಂದ್ರ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 3219ಕ್ಕೆ ಅನುಬಂಧ

ರಾಷ್ಟ್ರಕವಿ ಕುವೆಂಪು ಅವರ ಜನ್ಮ ಶತಮಾನೊತ್ಸವ ಆಚರಣೆ ಅಂಗವಾಗಿ ಅನುಷ್ಠಾನಗೊಳಿಸಿರುವ ಯೋಜನೆಗಳು

1. ದಿನಾಂಕ: 29.12.2003 ರಂದು ಬೆಂಗಳೂರಿನಲ್ಲಿ ಹಾಗೂ ರಾಜ್ಯಾದ್ಯಂತ ಎಲ್ಲ ಜಿಲ್ಲೆಗಳಲ್ಲಿ ಶತಮಾನೋತ್ಸವದ ಉದ್ಘಾಟನಾ ಸಮಾರಂಭ ನಡೆಸಿದೆ.
2. 250 ಮಂದಿ ಗಾಯಕ ಗಾಯಕಿಯರಿಂದ ದಿನಾಂಕ: 29.12.2003 ರಂದು ಉದ್ಘಾಟನಾ ಸಮಾರಂಭದಲ್ಲಿ ಕುವೆಂಪು ಅವರ ಗೀತೆಗಳ ಗಾಯನ ಕಾರ್ಯಕ್ರಮ ನಡೆದಿದೆ.
3. ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಮಿತಿ ಹಾಗೂ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ಸಮಿತಿಯನ್ನು ಸ್ಥಳೀಯವಾಗಿ ರಚಿಸಿಕೊಂಡಿದ್ದು ದಿನಾಂಕ: 29.12.2003 ರಂದು ಕುವೆಂಪು ಶತಮಾನೋತ್ಸವ ಉದ್ಘಾಟನಾ ಸಮಾರಂಭ ನಡೆದಿದೆ.

4. ಪ್ರತಿ ಜಿಲ್ಲೆಯಲ್ಲಿ ಕುವೆಂಪು ಅವರ ಜೀವನ ಹಾಗೂ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿಚಾರಸಂಕಿರಣ, ಉಪನ್ಯಾಸ, ನಾಟಕ ಪ್ರದರ್ಶನ ಹಾಗೂ ಸ್ಪರ್ಧೆಗಳನ್ನು ನಡೆಸಲಾಗಿದೆ.

5. ಕುವೆಂಪು ಕೃತಿಗಳನ್ನು ಆಧರಿಸಿ ನೃತ್ಯ ರೂಪಕಗಳನ್ನು ದಾವಣಗೆರೆ, ಶಿವಮೊಗ್ಗ, ತುಮಕೂರು, ಕೋಲಾರ, ಬೆಳಗಾಂ, ಬಿಜಾಪುರ, ಗುಲ್ಬರ್ಗ, ಬೀದರ್, ಮೈಸೂರು, ಹಾಸನ, ಮಂಗಳೂರು, ಚಿಕ್ಕಮಗಳೂರು, ಬಳ್ಳಾರಿ, ರಾಯಚೂರು ಜಿಲ್ಲೆಗಳಲ್ಲಿ ನಡೆಸಲಾಗಿದೆ. ಧಾರವಾಡ, ಕಾರವಾರಗಳಲ್ಲಿ 2005ರ ಮಾರ್ಚಿಯಲ್ಲಿ ನಡೆಯುವಂತೆ ಏರ್ಪಡಿಸಿದೆ.

6. ವಿವಿಧ ಜಿಲ್ಲಾ ಕೇಂದ್ರಗಳಾದ ಬಿಜಾಪುರ–ಬಸವನಬಾಗೇವಾಡಿಯಲ್ಲಿ–ಮುದ್ದೆಬಿಹಾಳ– ಮೈಸೂರು–ನಂಜನಗೂಡು –ಪಿರಿಯಾಪಟ್ಟಣ–ತುಮಕೂರು–ಚಿಕ್ಕನಾಯಕನಹಳ್ಳಿ– ಮಧುಗಿರಿ– ಹಾಸನ– ಸಕಲೇಶಪುರ–ಅರಸೀಕೆರೆ –ಕೋಲಾರ– ಚಿಕ್ಕಬಳ್ಳಾಪುರ– ಚಿಂತಾಮಣಿ–ಚಾಮರಾಜನಗರ–ಮಹದೇಶ್ವರ ಬೆಟ್ಟ–ಗುಂಡ್ಲುಪೇಟೆ–ಬೀದರ್–ಬಸವಕಲ್ಯಾಣ– ಮಂಗಳೂರು–ಧರ್ಮಸ್ಥಳ– ಪುತ್ತೂರು–ರಾಯಚೂರು– ಮಾನ್ವಿ– ಸಿಂಧನೂರು– ಉಡುಪಿ–ಕಾರ್ಕಳ–ಕುಂದಾಪುರ– ಕಾರವಾರ– ಶಿರಸಿ– ಸೋಂದಾ– ಕೊಪ್ಪಳ–ಗಂಗಾವತಿ– ಕಷ್ಟಗಿ– ಚಿಕ್ಕಮಗಳೂರು– ಅಜ್ಜಂಪುರ– ಕಡೂರು–ಬೆಳಗಾಂ–ಗೋಕಾಕ– ನಿಪ್ಪಾಣಿ ಇಲ್ಲಿ ಕುವೆಂಪು ಅವರ ನಾಟಕಗಳ ಪ್ರದರ್ಶನ ನಡೆದಿದೆ.

7. ಕುವೆಂಪು ಅವರ ವೈಚಾರಿಕ ಗೀತೆಗಳ ಧ್ವನಿ ಸುರಳಿಯನ್ನು ಸಂಗೀತ ಸಂಸ್ಥೆಯ ಪ್ರಾಯೋಜನೆಯೊಂದಿಗೆ ಬಿಡುಗಡೆ ಮಾಡಲಾಗಿದೆ.

8. **ಕುವೆಂಪು ಅವರ ಕತೆ, ಕಾದಂಬರಿ, ಕೃತಿಗಳ ಪ್ರಕಟಣೆಗಳು**

ಅ. ಕಿಂದರ ಜೋಗಿ
(ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಪ್ರಕಟಣೆ)

ಆ. ಬೆರಳ್–ಗೆ–ಕೊರಳ್, ಜಲಗಾರ, ಶೂದ್ರ ತಪಸ್ವಿ–I ಸಂಪುಟ
(ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಹಯೋಗದೊಂದಿಗೆ ಪ್ರಕಟಣೆ ಇಲಾಖೆಯ ಧನಸಹಾಯ)

ಇ. ಕುವೆಂಪು ಅವರ ಸಾಹಿತ್ಯದಲ್ಲಿನ ವಿಷಯಗಳ ಕುರಿತ ಪತ್ರ ಸಂಪುಟ
(ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಪ್ರಕಟಣೆ)

ಈ. ಸಮಗ್ರ ಗದ್ಯ ಸಂಪುಟ–I ಮತ್ತು 2 ಸಂಪುಟಗಳು
(ಹಂಪಿ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ–ಇಲಾಖೆಯ ಧನಸಹಾಯ)

ಉ. "ಶ್ರೀ ರಾಮಾಯಣದರ್ಶನಂ" ಸಂಸ್ಕೃತ ಆವೃತ್ತಿ ಪ್ರಕಟಣೆ (ಅನುವಾದ ಶ್ರೀ ಸಿ.ಸಿ.ಜಿ. ಪುರುಷೋತ್ತಮ್–ಇಲಾಖೆಯ ಧನಸಹಾಯ)

ಊ. ಬೆರಳ್–ಗೆ–ಕೊರಳ್, ಶೂದ್ರ ತಪಸ್ವಿ ಸ್ಮಶಾನ ಕುರುಕ್ಷೇತ್ರ–ನಾಟಕ ಸಂಪುಟ–ಇಂಗ್ಲೀಷ್ ಆವೃತ್ತಿ–(ಅನುವಾದ: ದಾ:ಪ್ರಭುಶಂಕರ್) (ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪ್ರಕಟಣೆ)

ಎ. ಕುವೆಂಪು ಸಮಗ್ರ ನಾಟಕ ಸಂಪುಟ ಮುದ್ರಿಸಲಾಗಿದೆ. (ಹಂಪಿ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ–ಇಲಾಖೆಯ ಧನಸಹಾಯ)

ಏ. "ಶ್ರೀ ರಾಮಾಯಣ ದರ್ಶನಂ" ಕೃತಿಯ ಕನ್ನಡ ಆವೃತ್ತಿಯ ಪುನರ ಮುದ್ರಣವಾಗಿದೆ. (ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದೊಂದಿಗೆ–ಇಲಾಖೆಯ ಧನಸಹಾಯ)

ಐ. ಕುವೆಂಪು ಅವರ ಸಣ್ಣ ಕಥೆಗಳ ಇಂಗ್ಲೀಷ್ ಆವೃತ್ತಿ ಮುದ್ರಣವಾಗಿದೆ. (ಅನುವಾದ ಶ್ರೀ ಪಿ. ಶ್ರೀನಿವಾಸರಾವ್–ಇಲಾಖೆಯ ಪ್ರಕಟಣೆ)

ಒ. "ಶ್ರೀ ರಾಮಾಯಣ ದರ್ಶನಂ" ಇಂಗ್ಲೀಷ್ ಆವೃತ್ತಿಯ ಪ್ರಕಟಣೆ (ಕೇಂದ್ರ ಸಾಹಿತ್ಯ ಅಕಾಡೆಮಿ)

9. ಶಾಲಾ ಕಾಲೇಜುಗಳಲ್ಲಿ ಕುವೆಂಪು ಅವರ ಹಾಗೂ ಅವರ ಸಾಹಿತ್ಯ ಕುರಿ ವಿಚಾರ ಸಂಕಿರಣ ಉಪನ್ಯಾಸ, ಸ್ಪರ್ಧೆಗಳು, ಇತ್ಯಾದಿಗಳನ್ನು ಒಳಗೊಂಡಂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದಿದೆ.

10. ಕುವೆಂಪು ಹಾಗೂ ಅವರ ಸಾಹಿತ್ಯ ಸೃಷ್ಟಿಗೆ ಕಾರಣವಾದ ನಿಸರ್ಗ ಚಿತ್ರಗಳನ ಒಳಗೊಂಡ ಸರ್ಕಾರಿ ಕ್ಯಾಲೆಂಡರ್‌ಗಳನ್ನು ಹೊರತರಲಾಗಿದೆ.

11. ದಿನಾಂಕ: 29.12.2003 ರಿಂದ ದಿನಾಂಕ: 28.12.2004 ರವರೆಗೆ 'ವಿಶ್ವ ಮಾನ ವರ್ಷ' ವೆಂದು ಘೋಷಿಸಲಾಗಿದೆ.

12. ಕುಪ್ಪಳ್ಳಿಯಿಂದ ಹಿರೇಕೊಡಿಗೆಯವರೆಗಿನ ಅರಣ್ಯ ಪ್ರದೇಶವನ 'ಬಯೋರಿಜರ್ವ್' ಎಂದು ಘೋಷಿಸಿದೆ.

13. ಸರ್ಕಾರದ ಎಲ್ಲಾ ಪ್ರಕಟಣೆಗಳ ಮೇಲೆ 'ವಿಶ್ವ ಮಾನವ ವರ್ಷ' ವೆಂದ ನಮೂದಿಸಿ 'ವಿಶ್ವ ಮಾನವ ಸಂದೇಶ' ವನ್ನು ಮುದ್ರಿಸಲಾಗಿದೆ.

14. 'ಜಯ ಭಾರತ ಜನನಿಯ ತನುಜಾತೆ' ಗೀತೆಯನ್ನು ನಾಡಗೀತೆಯಾ ಘೋಷಿಸಲಾಗಿದೆ.

15. ನವದೆಹಲಿಯಲ್ಲಿ ಕುವೆಂಪು ಕುರಿತು ಅವರ ಜೀವನ ಹಾಗೂ ವಿಚಾರ ಧಾರೆಗಳ ವಿವಿಧ ಕಾರ್ಯಕ್ರಮಗಳನ್ನು ನಡೆಸಲಾಗಿದೆ.

16. ಹೊರರಾಜ್ಯಗಳಲ್ಲಿ ಕುವೆಂಪು ಅವರ ಕುರಿತ ನಾಟಕ ಪ್ರದರ್ಶನ ಗೀತಾರಾಯನ, ವಿಚಾರ ಸಂಕಿರಣಗಳು ನಡೆದಿದೆ.

17. ಬೆಂಗಳೂರು ದಕ್ಷಿಣ ಭಾಗದಲ್ಲಿ 22 ಎಕರೆ ಪ್ರದೇಶದಲ್ಲಿ ಮಹಾನಗರ ಪಾಲಿಕೆ ನಿರ್ಮಿಸಲಿರುವ ತಾವರೆಕೆರೆ ಉದ್ಯಾನವನಕ್ಕೆ ಕುವೆಂಪು ಅವರ ಹೆಸರನ್ನಿಡಲು ಕ್ರಮ ಕೈಗೊಳ್ಳಲಾಗಿದೆ.

18. ಧಾರವಾಡದಲ್ಲಿ ದಿನಾಂಕ: 30.11.2004 ರಂದು 'ಅಂತರ ಭಾರತಿ' ಕವಿ ಸಮ್ಮೇಳನ ನಡೆದಿದೆ.

19. ಉಡುಪಿಯಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಾದೇಶಿಕ ಕೇಂದ್ರವು 29.12.2004 ಮಾಹೆಯಲ್ಲಿ ಕುವೆಂಪು ಅವರ ಹಾಗೂ ಅದರ ಸಾಹಿತ್ಯ ಕುರಿತು ವಿಚಾರ ಸಂಕಿರಣ ನಡೆಸಿದೆ.

2259(3220) ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಮುಖ್ಯಮಂತ್ರಿಗಳು ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಮಂಜೂರಾದ ಹಾಗೂ ಖಾಲಿ ಇರುವ ವಿವಿಧ ಹುದ್ದೆಗಳು ಎಷ್ಟೆಷ್ಟು: (ವಿವರ ನೀಡುವುದು) (ತಾಲ್ಲೂಕುವಾರು ವಿವರ ನೀಡುವುದು);

ಆ) ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು;

ಇ) ಬಹಳಷ್ಟು ಖಾಲಿಯಿರುವ ಹುದ್ದೆಗಳಿಂದ ಆಡಳಿತಕ್ಕೆ ಹಾಗೂ ಆದಾಯ ಸೋರಿ ಹೋಗುವುದನ್ನು ತಪ್ಪಿಸಲು ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಮಂಜೂರಾಗಿರುವ ಹುದ್ದೆಗಳ ಒಟ್ಟು ಸಂಖ್ಯೆ: 1096 ಮತ್ತು ಖಾಲಿ ಇರುವ ಹುದ್ದೆಗಳ ಸಂಖ್ಯೆ 246. ಇಲಾಖೆಯಲ್ಲಿ ತಾಲ್ಲೂಕು ಮಟ್ಟದ ಕಛೇರಿಗಳಿರುವುದಿಲ್ಲ. ಜಿಲ್ಲಾ ಹಾಗೂ ಕೆಲವು ಉಪ ವಿಭಾಗದ ಮಟ್ಟದಲ್ಲಿರುತ್ತದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) 28 ಭೂವಿಜ್ಞಾನಿಗಳ ಭರ್ತಿಗೆ ಸರ್ಕಾರ ಅನುಮತಿ ನೀಡಿದೆ. ಹಾಗೂ ನೇಮಕಾತಿಗೆ ಪ್ರಕ್ರಿಯೆ ನಡೆಯುತ್ತಿದೆ. ಆರ್ಥಿಕ ಮಿತವ್ಯಯದ ಆದೇಶವನ್ನು ಸಡಿಲಿಸಿದ ನಂತರ ಉಳಿದ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಹೌದು.

Yes.